

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 18-01-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಹಝ್ರತ್ ಆಮಿರ್ ಬಿನ್ ಫುಹೈರ(ರ) ಬಗ್ಗೆ ಪ್ರಸ್ತಾಪಿಸುವೆನು. ಅವರ ಉಪನಾಮ ಅಬೂ ಅಮರ್ ಎಂದಾಗಿದ್ದು ಖಬೀಲ ಅಝ್‌ದಕ್ಕೆ ಸೇರಿದ್ದರು. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹರವರ ಅಖ್‌ಯಾಫಿ (ಎಂದರೆ ತಂದೆ ಬೇರೆ) ಸಹೋದರ ತುಫೈಲ್ ಬಿನ್ ಅಬ್ದುಲ್ಲಾರವರ ಗುಲಾಮನಾಗಿದ್ದರು. ಅವರು ಕಪ್ಪು ವರ್ಣದವರಾಗಿದ್ದರು. ಅವರು ಇಸ್ಲಾಮ್ ಪ್ರವೇಶಿಸಿದ ಮೊದಲಿಗರಲ್ಲಿ ಸೇರಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮ್‌ಗೆ ಹೋಗುವ ಮೊದಲೇ ಹಝ್ರತ್ ಆಮಿರ್(ರ) ಮುಸ್ಲಿಮರಾಗಿದ್ದರು. ಆಗ ಅವರು ಹಝ್ರತ್ ಅಬೂಬಕರ್(ರ)ರವರ ಆಡುಗಳನ್ನು ಮೇಯಿಸುತ್ತಿದ್ದರು. ಅವರು ಮುಸ್ಲಿಮರಾದ ನಂತರ ಅವಿಶ್ವಾಸಿಗಳು ಅವರಿಗೆ ಬಹಳ ಹಿಂಸೆ ನೀಡುತ್ತಿದ್ದರು. ಅನಂತರ ಹಝ್ರತ್ ಅಬೂಬಕರ್(ರ) ಅವರನ್ನು ಖರೀದಿಸಿ ಸ್ವತಂತ್ರನನ್ನಾಗಿ ಮಾಡಿದರು. ಹಿಜ್‌ರತ್ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಹಝ್ರತ್ ಅಬೂಬಕರ್(ರ) ಸೌರ್ ಗುಹೆಯಲ್ಲಿದ್ದಾಗ ಹಝ್ರತ್ ಆಮಿರ್(ರ) ಹಝ್ರತ್ ಅಬೂಬಕರ್(ರ)ರವರ ಆಡುಗಳನ್ನು ಮೇಯಿಸುತ್ತಿದ್ದರು. ಹಝ್ರತ್ ಅಬೂಬಕರ್(ರ) ನೀಡಿದ ಆಜ್ಞೆ ಪ್ರಕಾರ ಅವರು ಹಗಲು ಆಡುಗಳನ್ನು ಮೇಯಿಸಿ ಸಾಯಂಕಾಲ ಸೌರ್ ಗುಹೆಯ ಸಮೀಪಕ್ಕೆ ಆಡುಗಳನ್ನು ಅಟ್ಟಿಕೊಂಡು ಹೋಗುತ್ತಿದ್ದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಹಝ್ರತ್ ಅಬೂಬಕರ್(ರ) ಆಡುಗಳಿಂದ ಹಾಲು ಹಿಂಡಿ ಪಡೆದುಕೊಳ್ಳುತ್ತಿದ್ದರು. ಹಝ್ರತ್ ಅಬೂಬಕರ್(ರ)ರವರ ಪುತ್ರ ಅಬ್ದುಲ್ಲ ಸೌರ್ ಗುಹೆಗೆ ಹೋಗುತ್ತಿದ್ದಾಗ ಅವರ ಹಿಂದೆ ಹಝ್ರತ್ ಆಮಿರ್ ನಡೆದುಕೊಂಡು ಹೋಗಿ ಅವರ ಹೆಜ್ಜೆ ಗುರುತುಗಳನ್ನು ಅಳಿಸಿ ಬಿಡುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಅಬೂಬಕರ್(ರ)ರವರು ಸೌರ್ ಗುಹೆಯಿಂದ ಮದೀನದ ಕಡೆಗೆ ಹಿಜ್‌ರತ್ ಮಾಡಿದಾಗ ಹಝ್ರತ್ ಆಮಿರ್ ಸಹ ಅವರ ಜೊತೆಗಿದ್ದರು. ಹಝ್ರತ್ ಅಬೂಬಕರ್(ರ) ಅವರನ್ನು ತನ್ನ ಹಿಂದೆ ಒಂಟೆಯ ಮೇಲೆ ಕುಳ್ಳಿರಿಸಿದ್ದರು. ಅವರಿಗೆಲ್ಲಾ ಮಾರ್ಗ ತೋರಿಸುವವ ಬನೂ ಅದೀಲ್ ಗೋತ್ರದ ಒಬ್ಬ ಬಹುದೇವಾರಾಧಕನಾಗಿದ್ದನು. ಹಝ್ರತ್ ಆಮಿರ್ ಬಿನ್ ಫುಹೈರ ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಬಿಅ್‌ರ್ ಮಊನದ ಘಟನೆಯಲ್ಲಿ ಅವರು ತನ್ನ ನಲ್ವತ್ತನೆಯ ವರ್ಷ ಪ್ರಾಯದಲ್ಲಿ ಶಹೀದರಾದರು.

ಹಝ್ರತ್ ಅಬೂಬಕರ್(ರ) ಹಿಜ್‌ರತ್ ಮಾಡುವ ಮೊದಲು ಬಹುದೇವಾರಾಧಕರು ಹಿಂಸಿಸುತ್ತಿದ್ದ ಸತ್ಯವಿಶ್ವಾಸಿಗಳಾದ ಏಳು ಗುಲಾಮರನ್ನು ವಿಮೋಚಿಸಿದ್ದರು. ಅಲ್ಲಾಹನ ಮಾರ್ಗದಲ್ಲಿ ಹಿಂಸೆಗೆ ಪಾತ್ರರಾದ ಆ ಏಳು ಜನರಲ್ಲಿ ಹಝ್ರತ್ ಬಿಲಾಲ್ ಮತ್ತು ಹಝ್ರತ್ ಆಮಿರ್ ಬಿನ್ ಫುಹೈರ ಸೇರಿದ್ದರು. ಹಿಜ್‌ರತ್ ಬಗ್ಗೆ ವಿವರಿಸುತ್ತಾ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ: ಒಂದು ದಿವಸ ನಾವು ಮನೆಯಲ್ಲಿ ಕುಳಿತಿದ್ದಾಗ ಒಬ್ಬರು ಹೇಳಿದರು: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಲೆಗೆ ಬಟ್ಟೆ ಹೊದಿಸಿ ಬರುತ್ತಿದ್ದಾರೆಂದು. ಅಷ್ಟರೊಳಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿಗೆ ತಲಪಿ ಮನೆಯೊಳಗೆ ಬರಲು ಅನುಮತಿ ಕೇಳಿದರು. ಹಝ್ರತ್ ಅಬೂಬಕರ್ ಅನುಮತಿ ನೀಡಿದಾಗ ಅವರು ಒಳಗೆ ಬಂದು ಹೇಳಿದರು: ನನಗೆ ಹಿಜ್‌ರತ್ ಮಾಡಲು ಅನುಮತಿ ಲಭಿಸಿದೆ. ಹಝ್ರತ್ ಅಬೂಬಕರ್ ಹೇಳಿದರು: ನನ್ನನ್ನು ಸಹ ನಿಮ್ಮ ಜೊತೆ ಕರೆದುಕೊಂಡು ಹೋಗಿರಿ ಎಂದು. ಆಗಲಿ ನೀವು ಸಹ ನನ್ನ ಜೊತೆ ಬನ್ನಿರಿ ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು. ಆಗ ಹಝ್ರತ್ ಅಬೂಬಕರ್ ಹೇಳಿದರು: ನನ್ನ ತಂದೆ ತಾಯಂದಿರು ನಿಮಗೋಸ್ಕರ ಬಲಿಯಾಗಲಿ. ನನ್ನ ಎರಡು ಒಂಟೆಗಳಲ್ಲಿ ಒಂದನ್ನು ನೀವು ತೆಗೆದುಕೊಳ್ಳಿರಿ. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ಅದರ ಬೆಲೆಯನ್ನು ಪಾವತಿಸಿ ತೆಗೆದುಕೊಳ್ಳುವೆನು.

ಹಝ್ರತ್ ಆಯಿಶ(ರ) ಹೇಳುತ್ತಾರೆ: ನಾವು ಅವರಿಬ್ಬರಿಗೆ ಅವರ ಪ್ರಯಾಣಕ್ಕೆ ಆವಶ್ಯಕವಾದ ಸಾಮಗ್ರಿಗಳನ್ನು ಸಿದ್ಧಪಡಿಸಿದೆವು. ನಾವು ಅವರಿಗೆ ಆಹಾರ ಸಾಮಗ್ರಿಗಳನ್ನು ತಯಾರಿಸಿ ಚರ್ಮದ ಚೀಲಕ್ಕೆ ಹಾಕಿದೆವು. ಹಝ್ರತ್ ಅಬೂಬಕರ್(ರ)ರವರ ಪುತ್ರಿ ಅಸ್‌ಮಾ ತನ್ನ ಸೊಂಟಕ್ಕೆ ಕಟ್ಟಿದ್ದ ದಾರದಿಂದ ಒಂದು ತುಂಡು ಕತ್ತರಿಸಿ ಚೀಲದ ಬಾಯಿ ಕಟ್ಟಿದಳು. ಆ ಕಾರಣದಿಂದ ಅವರ ಹೆಸರು ಝಾತುನ್ನಿತಾಖ್ ಎಂದಾಯಿತು. ಅನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಅಬೂಬಕರ್(ರ) ಸೌರ್ ಪರ್ವತದ ಒಂದು ಗುಹೆಗೆ ಹೋಗಿ ಅಲ್ಲಿ ಮೂರು ರಾತ್ರಿ ಅಡಗಿ ಕುಳಿತಿದ್ದರು. ಹಝ್ರತ್ ಅಬೂಬಕರ್‌ರವರ ಪುತ್ರ ಅಬ್ದುಲ್ಲ ರಾತ್ರಿ ಅವರ ಬಳಿಗೆ ಹೋಗಿ ಮಲಗಿ ಬೆಳಿಗ್ಗೆ ಇನ್ನೂ ಕತ್ತಲೆ ಇರುವಾಗಲೇ ಮರಳಿ ಬಂದು ಮನೆಯಲ್ಲಿಯೇ ರಾತ್ರಿ ಇದ್ದುದಾಗಿ ಖುರೈಶಿಗಳಿಗೆ ತೋರುವಂತೆ ಮಾಡುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಹಝ್ರತ್ ಅಬೂಬಕರ್(ರ) ಬನೂ ದೈಲ್ ಗೋತ್ರದ ಒಬ್ಬನಿಗೆ ಹಣ ಕೊಟ್ಟು ರಸ್ತೆ ತೋರಿಸಲು ನೇಮಿಸಿದ್ದರು.

ಅವನು ರಸ್ತೆ ತೋರಿಸುವುದರಲ್ಲಿ ನಿಪುಣನಾಗಿದ್ದನು. ಅವನು ಖುರೈಶರ ಧರ್ಮವನ್ನೇ ಅವಲಂಬಿಸುವವನಾಗಿದ್ದನು. ಅವನ ಮೇಲೆ ನಂಬಿಕೆ ಇರಿಸಿ ಒಂಟೆಗಳನ್ನು ಅವನ ವಶಕ್ಕೆ ನೀಡಿ ಮೂರು ದಿನಗಳ ನಂತರ ಬೆಳಿಗ್ಗೆ ಒಂಟೆಗಳನ್ನು ಸೌರ್ ಗುಹೆಯ ಸಮೀಪ ತರಲು ಅವನಿಂದ ವಾಗ್ದಾನ ಪಡೆಯಲಾಗಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಅಬೂಬಕರ್(ರ) ಜೊತೆಗೆ ಆಮಿರ್ ಬಿನ್ ಫುಹೈರ ಸಹ ಪ್ರಯಾಣಿಸಿದರು. ರಸ್ತೆ ತೋರಿಸುವವನು ಈ ಮೂವರನ್ನೂ ಸಮುದ್ರದ ಕರಾವಳಿ ಮಾರ್ಗದಲ್ಲಿ ಕರೆದುಕೊಂಡು ಮುಂದೆ ಸಾಗಿದನು.

ಸುರಾಖ ಬಿನ್ ಮಾಲಿಕ್ ಬಿನ್ ಔಸಮ್ ಹೇಳುತ್ತಾರೆ: ನಮ್ಮ ಬಳಿಗೆ ಖುರೈಶರ ಪ್ರತಿನಿಧಿ ಬಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಅಬೂಬಕರ್ ಇವರಲ್ಲಿ ಯಾರನ್ನು ಕೊಂದರೂ ಅಥವಾ ಸೆರೆ ಹಿಡಿದರೂ ಸಿಗುವ ಹಣವೆಷ್ಟೆಂದು ವಿವರಿಸಿದನು. ನಾನು ನನ್ನ ಗೋತ್ರದವರ ಜೊತೆ ಕುಳಿತಿದ್ದಾಗ ಒಬ್ಬ ಬಂದು ಹೇಳಿದನು: ನಾನು ಸಮುದ್ರದ ಕರಾವಳಿಯಲ್ಲಿ ಕೆಲವು ನೆರಳುಗಳನ್ನು ಕಂಡೆನು. ಅವು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಅವರ ಸಂಗಡಿಗನದೆಂದು ತೋರುತ್ತದೆ. ನಾನು ಸ್ವಲ್ಪ ಹೊತ್ತಿನ ನಂತರ ಎದ್ದು ನಿಂತು ಮನೆಗೆ ಹೋಗಿ ನನ್ನ ಕುದುರೆಯ ಮೇಲೇರಿ ಹೊರಟೆ. ಅದು ನನ್ನನ್ನು ವೇಗವಾಗಿ ಕೊಂಡೊಯ್ಯಿತು. ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ತಲಪಿದಾಗ ಕುದುರೆ ಮುಗ್ಗರಿಸಿ ಬಿದ್ದಿತು ಮತ್ತು ಅದರ ಮೇಲಿನಿಂದ ನಾನು ಕೆಳಗೆ ಬಿದ್ದೆ. ನಾನು ಎದ್ದು ನಿಂತು ನನ್ನ ಬತ್ತಳಿಕೆಯಿಂದ ಬಾಣ ಎತ್ತಿ ಶಕುನ ನೋಡಿದೆ. ಶಕುನ ನನಗೆ ಹಾನಿ ಉಂಟಾಗುವುದೆಂದಾಗಿತ್ತು. ನಾನು ಕುದುರೆಯ ಮೇಲೇರಿ ಶಕುನದ ವಿರುದ್ಧ ವರ್ತಿಸಿದೆ. ನನ್ನ ಕುದುರೆ ವೇಗದಿಂದ ಸಾಗಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದನ್ನು ಆಲಿಸುವಷ್ಟು ಹತ್ತಿರಕ್ಕೆ ತಲಪಿದೆ. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅತ್ತಿತ್ತ ನೋಡುತ್ತಿರಲಿಲ್ಲ. ಆದರೆ ಹಝ್ರತ್ ಅಬೂಬಕರ್(ರ) ಬಹಳ ಸಾರಿ ಹಿಂದಕ್ಕೆ ತಲೆ ತಿರುಗಿಸಿ ನೋಡುತ್ತಿದ್ದರು. ನನ್ನ ಕುದುರೆಯ ಮುಂಗಾಲುಗಳು ಮೊಣಕಾಲಿನ ತನಕ ಹೂತು ಹೋಯಿತು. ನಾನು ಕೆಳಗೆ ಬಿದ್ದೆ. ನಾನು ಪುನಃ ಬಾಣದಿಂದ ಶಕುನ ನೋಡಿದಾಗ ಅದು ನನಗೆ ಇಷ್ಟಕರವಲ್ಲವೆಂದು ಕಂಡಿತು. ಎಂದರೆ ನನಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹಿಡಿಗೂಡಲು ಸಾಧ್ಯವಿಲ್ಲ ಎಂದು. ಆಗ ನಾನು ಉಚ್ಚಸ್ವರದಲ್ಲಿ ಕೂಗಿ ಹೇಳಿದೆ: ನೀವು ಸುರಕ್ಷಿತರಾಗಿರುವಿರಿ ಎಂದು. ಅಗ ಅವರು ನಿಂತರು. ನನಗೆ ಅವರ ಸಮೀಪಕ್ಕೆ ತಲಪಲು ತಡೆಯಾದುದನ್ನು ನೋಡಿ ನನ್ನ ಹೃದಯದಲ್ಲಿ ಹೀಗೆ ಯೋಚನೆ ಉಂಟಾಯಿತು: ನಿಶ್ಚಯವಾಗಿಯೂ ಅವರೇ ಜಯಿಸುವರೆಂದು. ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮಕ್ಕದ ಅವಿಶ್ವಾಸಿಗಳ ಎಲ್ಲ ಕೆಟ್ಟ ನಿರ್ಧಾರಗಳ ಬಗ್ಗೆ ತಿಳಿಸಿದೆನು. ಪೈಗಂಬರರು ಹೇಳಿದರು: ನಮ್ಮ ಪ್ರಯಾಣದ ಸ್ಥಿತಿಯ ಬಗ್ಗೆ ರಹಸ್ಯ ಕಾಪಾಡಬೇಕು. ಆಗ ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ನನಗೆ ಅಭಯ ನೀಡುವ ಬಗ್ಗೆ ಒಂದು ಪತ್ರ ಬರೆದುಕೊಡಿರಿ ಎಂದು ಹೇಳಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಮಿರ್ ಬಿನ್ ಫುಹೈರರೊಂದಿಗೆ ಬರೆಯಲು ಹೇಳಿದರು. ಅವರು ಒಂದು ಚರ್ಮದ ತುಂಡಿನಲ್ಲಿ ಬರೆದುಕೊಟ್ಟರು. ಅನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿಂದ ಮುಂದೆ ಸಾಗಿದರು.

ಮದೀನದ ಮುಸ್ಲಿಮರಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಿಂದ ಹೊರಟ ಸಮಾಚಾರ ಲಭಿಸಿದಾಗ ಪ್ರತಿದಿನ ಅವರು ಹುರ್ರ ಮೈದಾನದವರೆಗೆ ಹೋಗಿ ಅಲ್ಲಿ ಮದ್ಯಾಹ್ನದ ತನಕ ಕುಳಿತು ಪೈಗಂಬರರನ್ನು ಎದುರು ನೋಡುತ್ತಿದ್ದರು. ನಂತರ ಸೆಖೆಯ ಕಾರಣ ಮರಳುತ್ತಿದ್ದರು. ಒಂದು ದಿನ ಒಬ್ಬ ಯಹೂದಿ ತನ್ನ ಮನೆಯ ಮಾಳಿಗೆಯ ಮೇಲೇರಿ ನೋಡಿದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮತ್ತು ಅವರ ಸಂಗಡಿಗರನ್ನು ದೂರದಿಂದ ಕಂಡನು. ಅವನು ಉಚ್ಚಧ್ವನಿಯಲ್ಲಿ ಹೇಳಿದನು: ಮದೀನದ ಅರಬಿಗಳೇ, ನೀವು ಪ್ರತೀಕ್ಷಿಸುತ್ತಿದ್ದ ನಿಮ್ಮ ನಾಯಕ ಬರುತ್ತಿದ್ದಾರೆ. ಆಗ ಮುಸ್ಲಿಮರು ತಮ್ಮ ಆಯುಧಗಳನ್ನು ಎತ್ತಿಕೊಂಡು ಹುರ್ರ ಮೈದಾನದ ಕಡೆಗೆ ಹೋಗಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸ್ವಾಗತಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಂದಿಗೆ ಬಲಗಡೆಗೆ ತಿರುಗಿ ಬನೀ ಅಮರ್ ಬಿನ್ ಔಫ್‌ರ ಬಡಾವಣೆಯಲ್ಲಿ ಅವರೊಂದಿಗೆ ಇಳಿದರು. ಅದು ಸೋಮವಾರ ಮತ್ತು ರಬೀಉಲ್ ಅವ್ವಲ್ ತಿಂಗಳಾಗಿತ್ತು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಬಡಾವಣೆಯಲ್ಲಿ ಹತ್ತಕ್ಕಿಂತ ಸ್ವಲ್ಪ ಹೆಚ್ಚು ರಾತ್ರಿಗಳನ್ನು ಕಳೆದರು. ಅಲ್ಲಿ ತಖ್ವದ ಅಸ್ತಿಭಾರದ ಮೇಲೆ ಮಸ್‌ಜಿದನ್ನು ನಿರ್ಮಿಸಲಾಯಿತು. ಅದರಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝ್ ನಿರ್ವಹಿಸಿದರು. ಅನಂತರ ಅವರು ತನ್ನ ಒಂಟೆಯೇರಿ ಹೊರಟಾಗ ಅವರ ಜೊತೆಗಿದ್ದವರು ಕಾಲುನಡೆಯಾಗಿ ಅವರನ್ನು ಹಿಂಬಾಲಿಸಿದರು. ಹಾಗೆ ಒಂಟೆ ಮುಂದೆ ಸಾಗುತ್ತಾ ಮದೀನದೊಳಗೆ ಈಗ ಮಸ್‌ಜಿದ್ ನಬವೀ ಇರುವಲ್ಲಿ ನಿಂತಿತು. ಅದು ಕೆಲವು ಮುಸ್ಲಿಮರು ನಮಾಝ್ ನಿರ್ವಹಿಸುತ್ತಿದ್ದ ಸ್ಥಳವಾಗಿತ್ತು. ಆ ಸ್ಥಳ ಸಹ್ಲ್ ಮತ್ತು ಸುಹೈಲ್ ತಮ್ಮ ಖರ್ಜೂರ ಒಣಗಿಸುತ್ತಿದ್ದ ಸ್ಥಳವಾಗಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಇಬ್ಬರು ತರುಣರನ್ನು ಕರೆದು ಆ ಸ್ಥಳದಲ್ಲಿ ಮಸ್‌ಜಿದ್ ನಿರ್ಮಿಸಲು ಆ ಸ್ಥಳದ ಬೆಲೆ ಎಷ್ಟೆಂದು ವಿಚಾರಿಸಿದರು. ಅವರಿಬ್ಬರು ಹೇಳಿದರು: ನಾವು ಈ ಭೂಮಿಯನ್ನು ತಮಗೆ ಉಚಿತವಾಗಿ ಕೊಡುತ್ತೇವೆ. ಆದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಚಿತವಾಗಿ ಭೂಮಿ ಪಡೆಯಲು ನಿರಾಕರಿಸಿದರು. ಆ ಭೂಮಿ ಅವರಿಂದ ಖರೀದಿಸಿ ಅಲ್ಲಿ ಮಸ್‌ಜಿದ್ ನಿರ್ಮಿಸಲಾಯಿತು. ಈ ಮಸ್‌ಜಿದ್ ನಿರ್ಮಿಸುವಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ

ವಸಲ್ಲಮರು ಸಹ ಜನರ ಜೊತೆ ಇಟ್ಟಿಗೆಗಳನ್ನು ಹೊರುತ್ತಾ ಇದ್ದರು. ಅವರು ಇಟ್ಟಿಗೆಗಳನ್ನು ಹೊತ್ತು ನಡೆಯುವಾಗ ಹೀಗೆ ಹೇಳುತ್ತಿದ್ದರು: **ಅಲ್ಲಾಹುಮ್ಮ ಇನ್ನಲ್ ಅಜ್‌ರ ಅಜ್‌ರಲ್ ಆಖಿರತಿ ಫರ್‌ಹಿಮಿಲ್ ಅನ್‌ಸಾರ ವಲ್ ಮುಹಾಜಿರ.** ಓ ಅಲ್ಲಾಹ್, ನಿಶ್ಚಯವಾಗಿಯೂ ವಾಸ್ತವಿಕ ಪ್ರತಿಫಲ ಪರಲೋಕದ ಪ್ರತಿಫಲವೇ ಆಗಿದೆ. ಆದುದರಿಂದ ನೀನು ಅನ್‌ಸಾರ್‌ಗಳಿಗೂ ಮುಹಾಜಿರ್‌ಗಳಿಗೂ ಕರುಣೆದೋರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಿಜ್‌ರತ್‌ಗೆ ಸಂಬಂಧಿಸಿದ ಘಟನೆಯನ್ನು ಹೀಗೆ ವಿವರಿಸಿದ್ದಾರೆ: ಮಕ್ಕದ ಜನರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಂಡು ಹಿಡಿಯಲು ವಿಫಲರಾದಾಗ ಅವರು ಹೀಗೆ ಪ್ರಕಟಿಸಿದರು: ಯಾರು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಥವಾ ಅಬೂಬಕರರನ್ನು ಜೀವಸಹಿತ ಅಥವಾ ಜೀವರಹಿತವಾಗಿ ನಮಗೆ ತಂದೊಪ್ಪಿಸುವರೋ ಅವರಿಗೆ ಒಂದು ನೂರು ಹೆಣ್ಣು ಒಂಟೆಗಳನ್ನು ಬಹುಮಾನವಾಗಿ ನೀಡಲಾಗುವುದು. ಈ ಪ್ರಕಟಣೆಯನ್ನು ಮಕ್ಕ ನಗರದ ಸುತ್ತುಮುತ್ತಲಿನ ಗೋತ್ರ ವರ್ಗದವರಿಗೆ ಸಹ ತಲಪಿಸಲಾಗಿತ್ತು. ಈ ಪ್ರಕಟಣೆಯನ್ನು ಆಲಿಸಿದ ಸುರಾಖ ಬಿನ್ ಮಾಲಿಕ್ ಎಂಬ ಒಬ್ಬ ಗ್ರಾಮೀಣ ಪ್ರದೇಶದ ಮುಂದಾಳು ಬಹುಮಾನಗಳಿಸುವ ಆಶೆಯಿಂದ ಆತನು ಹುಡುಕುತ್ತಾ ಮದೀನಕ್ಕೆ ಹೋಗುವ ಮಾರ್ಗದಲ್ಲಿ ಮುಂದೆ ಸಾಗಿದಾಗ ಎರಡು ಒಂಟೆಗಳನ್ನೂ ಅವುಗಳ ಸವಾರರನ್ನೂ ಕಂಡು ಅದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಸಂಗಡಿಗರು ಆಗಿರಬಹುದೆಂದು ಮನವರಿಕೆ ಮಾಡಿ ತನ್ನ ಕುದುರೆಯನ್ನು ಆ ಒಂಟೆಗಳನ್ನು ತಲಪಲು ಓಡಿಸಿದಾಗ ಕುದುರೆ ಮಾರ್ಗದಲ್ಲಿ ಮುಗ್ಗರಿಸಿತು. ಸುರಾಖ ಕುದುರೆಯಿಂದ ಬಿದ್ದುಬಿಟ್ಟನು. ಸುರಾಖ ಮುಸ್ಲಿಮನಾದ ನಂತರ ಈ ಸಂಭವವನ್ನು ಈ ರೀತಿ ವಿವರಿಸುತ್ತಾರೆ: ಆಮಿರ್ ಬಿನ್ ಫುಹೈರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿರ್ದೇಶ ಪ್ರಕಾರ ಅಭಯ ಪ್ರದಾನ ಪತ್ರ ಬರೆದು ನೀಡಿದಾಗ ಸುರಾಖ ಮರಳಿ ಹೋಗಲು ತೊಡಗಿದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನು ಮುಂದಿನ ಸ್ಥಿತಿಯ ಬಗ್ಗೆ ಅದೃಶ್ಯ ಜ್ಞಾನ ನೀಡಿದನು. ಆಗ ಅವರು ಸುರಾಖನೊಂದಿಗೆ ಹೇಳಿದರು: 'ಸುರಾಖ, ನಿನ್ನ ಕೈಗಳು ಕಿಸ್ರ ಚಕ್ರವರ್ತಿಯ ಕಂಕಣಗಳನ್ನು ಧರಿಸಿರುವಾಗ ನಿನ್ನ ಸ್ಥಿತಿ ಹೇಗಾಗುವುದು?' ಸುರಾಖ ಗಾಬರಿಗೊಂಡು ಕೇಳಿದನು: ಕಿಸ್ರಾ ಬಿನ್ ಹುರ್‌ಮಿಝ್ ಎಂಬ ಇರಾನಿನ ಚಕ್ರವರ್ತಿಯ ಕಂಕಣಗಳೋ? ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗ ಹೌದೆಂದು ಹೇಳಿದರು.

ಈ ಭವಿಷ್ಯವಾಣಿ 16–17 ವರ್ಷಗಳ ನಂತರ ಅಕ್ಷರಶಃ ಈಡೇರಿತು. ಸುರಾಖ ಮುಸ್ಲಿಮರಾಗಿ ಮದೀನಕ್ಕೆ ಆಗಮಿಸಿದರು. ಇಸ್ಲಾಮಿನ ಅಭಿವೃದ್ಧಿ ಹೊಂದುತ್ತಿರುವ ವೈಭವವನ್ನು ಕಂಡು ಇರಾನಿಯರು ಮುಸ್ಲಿಮರ ವಿರುದ್ಧ ಆಕ್ರಮಣ ಮಾಡಲು ಪ್ರಾರಂಭಿಸಿದರು. ಅವರಿಗೆ ಇಸ್ಲಾಮನ್ನು ಧ್ವಂಸ ಗೊಳಿಸಲು ಸಾಧ್ಯವಾಗಲಿಲ್ಲ. ಬದಲಾಗಿ ಅವರು ಇಸ್ಲಾಮಿನಿಂದ ಧ್ವಂಸಗೊಳಿಸಲ್ಪಟ್ಟರು. ಕಿಸ್ರಾ ರಾಜನ ರಾಜಧಾನಿ ಮುಸ್ಲಿಮರ ಕುದುರೆಗಳ ಗೊರಸುಗಳಿಂದ ತುಳಿಯಲ್ಪಟ್ಟಿತು. ಇರಾನಿನ ಖಜಾನೆಗಳು ಮುಸ್ಲಿಮರ ಸ್ವಾಧೀನಕ್ಕೆ ಬಂದುವು. ಅದರಲ್ಲಿ ಕಿಸ್ರಾ ರಾಜನು ಸಿಂಹಾಸನಾರೂಢನಾಗುವಾಗ ಇರಾನ್ ಸಂಪ್ರದಾಯದಂತೆ ಧರಿಸುತ್ತಿದ್ದ ಬಂಗಾರದ ಕಂಕಣಗಳು ಸಹ ಇದ್ದುವು.

ಹಝ್ರತ್ ಉಮರ್(ರ)ರವರ ಮುಂದೆ ಯುದ್ಧದಲ್ಲಿ ಗಳಿಸಿದ ಇರಾನಿನ ಸಂಪತ್ತನ್ನು ತಂದಿರಿಸಿದಾಗ ಅದರಲ್ಲಿ ಕಿಸ್ರಾ ಚಕ್ರವರ್ತಿಯ ಬಂಗಾರದ ಬಳೆಗಳು ಸಹ ಇದ್ದವು. ಆಗ ಹಿಂದಿನ ಕಾಲದ ಎಲ್ಲಾ ಸಂಭವಗಳು ಅವರ ಕಣ್ಣು ಮುಂದೆ ಹಾದು ಹೋದುವು. ಅವರು ಸುರಾಖರನ್ನು ಕರೆಯಲು ಹೇಳಿದರು. ಸುರಾಖ ಬಂದಾಗ ಹಝ್ರತ್ ಉಮರ್(ರ) ಸುರಾಖರೊಂದಿಗೆ ಕಿಸ್ರಾನ ಕಂಕಣಗಳನ್ನು ಕೈಗಳಲ್ಲಿ ಧರಿಸಲು ಹೇಳಿದರು. ಸುರಾಖ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರ ಖಲೀಫರೇ, ಬಂಗಾರ ಧರಿಸುವುದು ಮುಸ್ಲಿಮ್ ಪುರುಷರಿಗೆ ನಿಷಿದ್ಧವಾಗಿದೆ. ಹಝ್ರತ್ ಉಮರ್(ರ) ಹೇಳಿದರು: ನೀವು ಈ ಕಂಕಣ ಧರಿಸಿದುದನ್ನು ಅಲ್ಲಾಹನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತೋರಿಸಿದ್ದನು. ನೀವು ಈ ಕಂಕಣ ಧರಿಸಬೇಕು. ಇಲ್ಲವಾದರೆ ನಾನು ನಿಮಗೆ ಶಿಕ್ಷೆ ನೀಡಬೇಕಾಗುವುದು. ಸುರಾಖ ಆ ಕಂಕಣಗಳನ್ನು ಕೈಗಳಲ್ಲಿ ಧರಿಸಿದರು. ಹಾಗೆ ಮುಸ್ಲಿಮರು ಆ ವೈಭವಶಾಲಿ ಭವಿಷ್ಯವಾಣಿ ಈಡೇರುವುದನ್ನು ಕಣ್ಣಾರೆ ಕಂಡರು.

ಹಝ್ರತ್ ಆಮಿರ್ ಬಿನ್ ಫುಹೈರ(ರ) ಮದೀನಕ್ಕೆ ಹಿಜ್‌ರತ್ ಮಾಡಿದಾಗ ಅಲ್ಲಿ ಅವರು, ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಬಿಲಾಲ್ ರೋಗಬಾಧಿತರಾದರು. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಾರ್ಥಿಸಿದಾಗ ಅವರಿಗೆ ರೋಗಶಮನವಾಯಿತು. ಹಝ್ರತ್ ಆಯಿಶ(ರ)ರವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಆ ರೋಗಿಗಳನ್ನು ಸಂದರ್ಶಿಸಲು ಅನುಮತಿ ಕೇಳಿದಾಗ ಅವರಿಗೆ ಅನುಮತಿ ನೀಡಲಾಯಿತು. ಹಝ್ರತ್ ಆಯಿಶ(ರ) ರೋಗಿಗಳನ್ನು ಸಂದರ್ಶಿಸಿ ಅವರ ಸ್ಥಿತಿಗತಿಗಳನ್ನು ಅವರ ಯೋಚನೆಗಳನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದಾಗ ಅವರು ಆಕಾಶದ ಕಡೆಗೆ ನೋಡಿ ಹೀಗೆ ಪ್ರಾರ್ಥಿಸಿದರು: **ಅಲ್ಲಾಹುಮ್ಮ ಹಬ್ಬಿಬ್ ಇಲೈನಲ್ ಮದೀನತ ಕಮಾ ಹಬ್ಬಬ್‌ತ ಇಲೈನಾ ಮಕ್ಕತ ವ ಅಶದ್ದು. ಅಲ್ಲಾಹುಮ್ಮ ಬಾರಿಕ್‌ಲನಾ ಫೀ ಸಾಇಹಾ ವ ಫೀ ಮುದ್ದಿಹಾ ವನ್‌ಖುಲ್ ವಬಾಹಾ ಇಲಾ ಮಾಯಆ.** ಓ ಅಲ್ಲಾಹ್, ನೀನು ನಮಗೆ ಮಕ್ಕ ನಗರವನ್ನು ಪ್ರಿಯಕರವನ್ನಾಗಿ ಮಾಡಿದ ಹಾಗೆಯೇ ಮದೀನವನ್ನು ಪ್ರಿಯಕರವನ್ನಾಗಿ ಮಾಡು ಮತ್ತು ಅದಕ್ಕಿಂತಲೂ ಮಿಗಿಲಾಗಿ. ಓ ಅಲ್ಲಾಹ್, ಮದೀನದ ಸಾಅ್‌ನಲ್ಲೂ ಮುದ್ದ್‌ನಲ್ಲೂ ನಮಗೆ ಅನುಗ್ರಹ ದಯಪಾಲಿಸು. ಅದರ ವಿಪತ್ತುಗಳನ್ನು ನಮ್ಮಿಂದ ದೂರ ಸರಿಸಿ ಅದನ್ನು ನಮಗೆ ಆರೋಗ್ಯದಾಯಕ ಪ್ರದೇಶವನ್ನಾಗಿ ಮಾಡು.

ಹಝ್ರತ್ ಆಮಿರ್ ಬಿನ್ ಫುಹೈರ(ರ) ಬಅ್‌ರ್ ಮಊನದ ಘಟನೆಯಲ್ಲಿ ಶಹೀದರಾದರು. ಹಝ್ರತ್

ಮುಸ್ಲಿಹ್ ಮೌಊದ್(ರ) ಹಝ್ರತ್ ಆಮಿರ್ ಬಿನ್ ಫುಹೈರರ ಶಹಾದತ್ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಇಸ್ಲಾಮ್ ಖಡ್ಗ ಬಲದಿಂದ ಜಯಶಾಲಿಯಾಗಲಿಲ್ಲ. ಇಸ್ಲಾಮ್ ಅದರ ಅತ್ಯಂತ ಶ್ರೇಷ್ಠ ಉಪದೇಶಗಳ ಮೂಲಕ ಜಯಶಾಲಿಯಾಯಿತು. ಆ ಉಪದೇಶಗಳು ಹೃದಯದೊಳಗೆ ಇಳಿಯುತ್ತಿದ್ದುವು ಮತ್ತು ಮನುಷ್ಯರ ಸ್ವಭಾವ ಗುಣಗಳಲ್ಲಿ ಅತ್ಯಂತ ಉತ್ಕೃಷ್ಟವಾದ ಬದಲಾವಣೆಯನ್ನು ಉಂಟು ಮಾಡುತ್ತಿದ್ದುವು. ಒಬ್ಬ ಸಹಾಬಿ ಹೇಳುತ್ತಾರೆ: ನಾನು ಮುಸ್ಲಿಮ್ ಆಗಲು ಕಾರಣವೇನೆಂದರೆ ನಾನು ಎಂತಹ ವಿದ್ರೋಹಿಗಳ ಅತಿಥಿಯಾಗಿದ್ದೆನೆಂದರೆ ಆ ಗೋತ್ರದ ಜನರು ಪವಿತ್ರ ಖುರ್‌ಆನ್ ಪಠಿಸುವ ಎಪ್ಪತ್ತು ಜನರನ್ನು ಹತ್ಯೆ ಮಾಡಿದ್ದರು. ಅವರಲ್ಲಿ ಒಬ್ಬರು ಬಾಕಿಯಾಗಿ ಉಳಿದಿದ್ದರು. ಅವರ ಹೆಸರು ಆಮಿರ್ ಬಿನ್ ಫುಹೈರ(ರ). ಅನೇಕ ಜನರು ಅವರನ್ನು ಹಿಡಿಗೂಡಿದ್ದರು. ಅವರಲ್ಲೊಬ್ಬ ಅವರ ಎದೆಗೆ ಈಟಿಯಲ್ಲಿ ತಿವಿದನು. ಈಟಿ ಅವರ ಎದೆಗೆ ನಾಟಿದ ಕೂಡಲೆ ಅವರು ಹೇಳಿದರು: **ಫುಝ್ತು ವ ರಬ್ಬಿಲ್ ಕಅಬ.** ಕಅಬದ ಪ್ರಭುವಿನಾಣೆ ನಾನು ಜಯಶಾಲಿಯಾದೆ. ಅವರ ಬಾಯಿಯಿಂದ ಈ ಮಾತನ್ನು ಆಲಿಸಿದಾಗ ನಾನು ಆಶ್ಚರ್ಯಗೊಂಡೆ. ಈ ವ್ಯಕ್ತಿ ತನ್ನ ಸಂಬಂಧಿಕರಿಂದ, ತನ್ನ ಪತ್ನಿ ಮತ್ತು ಮಕ್ಕಳಿಂದ ದೂರವಿದ್ದರೂ ಇಷ್ಟು ದೊಡ್ಡ ವಿಪತ್ತಿಗೆ ಗುರಿಯಾಗಿದ್ದರೂ ಈಟಿಯ ತಿವಿತದಿಂದ ಮೃತನಾಗುತ್ತಿದ್ದ ಆ ವ್ಯಕ್ತಿ ಹೇಳಿದುದು ಕಅಬದ ಪ್ರಭುವಿನಾಣೆ ನಾನು ಜಯಶಾಲಿಯಾದೆನು ಎಂದು ಮಾತ್ರ. ಆ ವ್ಯಕ್ತಿಯ ಮಾತು ನನ್ನ ಮೇಲೆ ಎಷ್ಟು ಪ್ರಭಾವ ಬೀರಿತೆಂದರೆ ನಾನು ತೀರ್ಮಾನಿಸಿದೆ ನಾನು ಅವರ ಕೇಂದ್ರಕ್ಕೆ ಹೋಗಿ ಅವರ ಧರ್ಮದ ಅಧ್ಯಯನ ಮಾಡುವೆನು. ಅನಂತರ ನಾನು ಮದೀನ ತಲಪಿ ಮುಸ್ಲಿಮನಾದೆನು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಯುದ್ಧಗಳಲ್ಲಿ ಶಹೀದರಾಗುವುದು ಸುಖಕರವೂ ಸಂತೋಷಕರವೂ ಆಗಿದೆ ಎಂದು ಆ ಸಹಾಬರು ಭಾವಿಸುತ್ತಿದ್ದರು. ಅವರಿಗೆ ಯುದ್ಧದಲ್ಲಿ ಏನಾದರೂ ದುಃಖವುಂಟಾಗುತ್ತಿದ್ದರೆ ಅದನ್ನು ದುಃಖ ಎಂದಲ್ಲ ಸುಖ ಎಂದು ಅವರು ಭಾವಿಸುತ್ತಿದ್ದರು.

ಆದುದರಿಂದ ಈ ಸಹಾಬರು ಬಹಳ ಭಾಗ್ಯಶಾಲಿಗಳಾಗಿದ್ದಾರೆ. ವಿಶಿಷ್ಟವಾಗಿ ಆಮಿರ್ ಬಿನ್ ಫುಹೈರ(ರ). ಅವರಿಗೆ ಹಝ್ರತ್ ಅಬೂಬಕರ್‌ರವರ ಸೇವೆ ಮಾಡಲು ಭಾಗ್ಯ ಸಹ ಲಭಿಸಿತ್ತು. ಅವರಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸೇವೆ ಸಲ್ಲಿಸುವ ಸಂದರ್ಭ ಸಹ ಲಭಿಸಿತ್ತು. ಅವರೊಂದಿಗೆ ಹಿಜ್‌ರತ್ ಸಹ ಮಾಡುವ ಸಂದರ್ಭ ಲಭಿಸಿತು. ನಿಷ್ಠೆಯ ಈ ಮುತ್ತುಗಳು ಪ್ರತಿಯೊಂದು ಸಂದರ್ಭದಲ್ಲಿ ನಿಷ್ಠೆ ತೋರಿಸಿದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತ ಗೊಳಿಸುತ್ತಾ ಇರಲಿ – ಆಮೀನ್.

—————————*****—————————


***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 18-01-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon